ಕರ್ನಾಟಕ ರಾಜ್ಯ ಪೊಲೀಸ್

# ಪ್ರಥಮ ವರ್ತಮಾನ ವರದಿ

(ದಂಡಪ್ರಕ್ರಿಯ ಸಂಹಿತೆ ಕಲಂ 154 ರ ಕೆಳಗೆ )

ಘನ ನ್ಯಾಯಾಲಯ : **XLII Addl CMM Court,Karnataka State, Bengaluru**

1. ಜಿಲ್ಲೆ : **Shivamogga** ವೃತ್ತ/ಉಪ ವಿಭಾಗ : **Shimoga Sub-Division** ಪೊಲೀಸ್ ಠಾಣೆ : **Doddapete PS**

ಅಪರಾಧ ಸಂಖ್ಯೆ : **0164/2022** ಪ್ರ.ವ.ವ.ದಿನಾಂಕ : **06/04/2022**

2. ಕಾಯ್ದೆ ಮತ್ತು ಕಲಂಗಳು : IPC 1860 (U/s-153A,295A,504,505(2),34)

3. (a) ಕೃತ್ಯ ನಡೆದ ದಿನ : Monday ದಿನಾಂಕ ದಿಂದ : 21/02/2022 ದಿನಾಂಕ ವರೆಗೆ : 22/02/2022

ವೇಳೆಯಿಂದ : 21:00:00 ವೇಳೆಯವರೆಗೆ : 23:55:00

(b) ಠಾಣೆಯಲ್ಲಿ ವರ್ತಮಾನ ಸ್ವೀಕರಿಸಿದ ದಿನಾಂಕ : 06/04/2022 18:00:00 ಬರವಣಿಗೆಯಲ್ಲಿ / ಹೇಳಿಕೆ : Judicial/Magistrate reference

(c) ಪಿರ್ಯಾದುದಾರ / ಬಾತ್ಮೀದಾರ ತಡವಾಗಿ ವರದಿ ಮಾಡಿದಕ್ಕೆ ಕಾರಣಗಳು :

(d) ಜನರಲ್ ಡೈರಿ ಉಲ್ಲೇಖ ಸಂಖ್ಯೆ ಮತ್ತು ಸಮಯ : 4 , 18:00:00

4. (a) ಕೃತ್ಯ ನಡೆದ ಸ್ಥಳ :

Shivamogga city, shivamogga town, Shivamogga, Karnataka,

(b) ಪೊಲೀಸ್ ಠಾಣೆ ಯಿಂದ ಇರುವ ದಿಕ್ಕು ಮತ್ತು ದೂರ : Towards East and 0.1/2 km From ps

(c) ಗ್ರಾಮ : B.H ROAD ಗಸ್ತಿನ ಹೆಸರು : BEAT 02

(d) ಸ್ಥಳವು ಬೇರೆ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುವಂತಹದ್ದು ಆದರೆ ಆ ಪೊಲೀಸ್ ಠಾಣೆಯ ಹೆಸರು :

ಜಿಲ್ಲೆ :

5. ಪಿರ್ಯಾದುದಾರ/ಬಾತ್ಮೀದಾರ :

(a) ಹೆಸರು : Riyaz Ahamed ತಂದೆ / ಗಂಡನ ಹೆಸರು : Eqbal Ahamed

| | | | |
|---|---|---|---|
| (b) ವಯಸ್ಸು | : 40 | (c) ವೃತ್ತಿ: | : Social Worker |
| (d) ಧರ್ಮ | : Muslim | (e) ಜಾತಿ | : MUSLIM |
| (f) ಫ್ಯಾಕ್ಸ್ | : | (g) ಇ-ಮೇಲ್: | : |
| (h) ದೂರವಾಣಿ | : | (i)ರಾಷ್ಟ್ರೀಯತೆ | : India |

(j) ಪಾಸ್ ಪೋರ್ಟ್ ಸಂಖ್ಯೆ : ನೀಡಿದ ದಿನಾಂಕ :

(k) ವಿಳಾಸ : Shivamogga Peace Organisation R,100 Feet Road iliyas nagara , Shivamogga , Karnataka

(l) ಲಿಂಗ : Male

(m) ಫಿರ್ಯಾದುದಾರ ಖುದ್ದಾಗಿ ನೋಡಿದ್ದರೆ ಅಥವಾ ಕೇಳಿಸಿಕೊಂಡಿದ್

ಫಿರ್ಯಾದುದಾರರು ಕೃತ್ಯವನ್ನು ನೋಡಿದ್ದಾರೆ

6. ಗೊತ್ತಿರುವ / ಅನುಮಾನಿತ/ಅಪರಿಚಿತ ವ್ಯಕ್ತಿಯ ಪೂರ್ತಿ ವಿವರಗಳು

| Sl.No. | ಹೆಸರು / ತಂದೆಯ ಹೆಸರು / ಜಾತಿ / ವಿಳಾಸ | ವಿಧ | ವ್ಯಕ್ತಿಯ ವಿಧ | ಲಿಂಗ | ವಯಸ್ಸು | ವೃತ್ತಿ |
|---|---|---|---|---|---|---|
| 1 | Eswarappa K S(A1) / Sharanappa / KURUBA ,Rural and Panchayath Raj Dept Minister,Karnataka govt Vidhanasaudha BangaloreBelagavi City, Karnataka | Accused | Common man | Male | 74 | Elected representatives |
| 2 | Chenni Yane Channabasappa(A2) ,Srigandha Nagara,Holehonnuru Road shivamogga townShivamogga, Karnataka | Accused | Common man | Male | 56 | |

7. ನೊಂದವರ ವಿವರಗಳು

| Sl. No | ಹೆಸರು | ವಿಳಾಸ | ಗಾಯದ ವಿಧ | ಲಿಂಗ | ವಯಸ್ಸು | ವೃತ್ತಿ |
|---|---|---|---|---|---|---|
| 1 | | | | | | |

8. ಕಳುವಾಗಿರುವ / ಬಾಗಿಯಾಗಿರುವ ಸ್ವತ್ತುಗಳ ವಿವರಗಳು

| Sl.No | Property Type | Item description | Estimated Value (in Rs.) |
|---|---|---|---|
| 1 | | | |

ಕಳುವಾಗಿರುವ / ಬಾಗಿಯಾಗಿರುವ ಸ್ವತ್ತುಗಳು ಮೌಲ್ಯ :

9. ಪಂಚನಾಮ ವರದಿ / ಯು.ಡಿ. ಕೇಸ್. ಸಂಖ್ಯೆ :

10. ಪ್ರಥಮ ವರ್ತಮಾನ ವರದಿಯ ವಿವರಗಳು

ದಿ:06-04-2022 ರಂದು ಸಂಜೆ 6.00 ಗಂಟೆಗೆ ಅಂಚೆ ಮೂಲಕ ಬಂದ ದೂರನ್ನು ಸ್ವೀಕರಿಸಿ ನೋಡಲಾಗಿ ಮಾನ್ಯ ಗೌರವಾನ್ವಿತ 42 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ವಿಶೇಷ ನ್ಯಾಯಾಲಯ ಬೆಂಗಳೂರು ರವರ ಪಿಸಿಆರ್ ನಂ 5716/22 ರ ದೂರು ಪ್ರತಿಯಲ್ಲಿನ ಸಾರಾಂಶವೇನೆಂದರೆ ಪಿರ್ಯಾದಿದಾರರು ಶಿರೋನಾಮೆಯಲ್ಲಿ ನಮೂದಿಸಿರುವ ಪಿರ್ಯಾದುದಾರರು ಮತ್ತು ಆರೋಪಿಗಳ ವಿಳಾಸಗಳು ಸರಿಯಾಗಿದ್ದು, ಘನ ನ್ಯಾಯಾಲಯದಿಂದ ಜಾರಿ ಮಾಡಬಹುದಾದ ಸಮನ್ಸ್, ನೋಟೀಸ್ ಸದರಿಯವರ ವಿಳಾಸಕ್ಕೆ ಜಾರಿ ಮಾಡಬಹುದಾಗಿರುತ್ತೆ ಪಿರ್ಯಾದುದಾರರಿಗೆ ಈ ಮೇಲ್ದಂಡ ವಿಳಾಸದ ಶಾಶ್ವತ ನಿವಾಸಿಯಾಗಿದ್ದು, ಪಿರ್ಯಾದುದಾರರು ಶಿವಮೊಗ್ಗ ಪೀಸ್ ಆರ್ಗನೈಸೇಷನ್ (ಅ)ನ ಕಾರ್ಯದರ್ಶಿಯಾಗಿ ಸಮಾಜದ ಹತ್ತು ಹಲವು ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗಿಯಾಗಿರುತ್ತಾರೆ. ಪಿರ್ಯಾದುದಾರರು ವೈಯಕ್ತಿಕವಾಗಿ ಮತ್ತು ತಮ್ಮ ಸಂಸ್ಥೆಯ ಅಧೀನದಲ್ಲಿ ಶಿವಮೊಗ್ಗ ಜಿಲ್ಲೆಯಾದ್ಯಂತ ಸಾಮಾಜಿಕ ಚಟುವಟಿಕೆಗಳನ್ನು ನಡೆಸುತ್ತಾ, ಸಂಸ್ಥೆ ಮತ್ತು ವೈಯಕ್ತಿಕವಾಗಿ ಒಳ್ಳೆಯ ಹೆಸರನ್ನು ಸಂಪಾದಿಸಿರುತ್ತಾರೆ.

ದಿ:20/02/2022 ರ ರಾತ್ರಿ 9-00 ಗಂಟೆಯ ಸಮಯದಲ್ಲಿ ಶಿವಮೊಗ್ಗ ನಗರದ ದೊಡ್ಡಪೇಟೆ ಠಾಣಾ ವ್ಯಾಪ್ತಿಯಲ್ಲಿ ಹರ್ಷ ಎನ್ನುವ ವ್ಯಕ್ತಿಯ ಕೊಲೆಯಾಗಿರುತ್ತದೆ, ಸದರಿ ಹರ್ಷ ಎಂಬುವ ಯುವಕನ ಕೊಲೆಯ ಬಗ್ಗೆ ಇನ್ನೂ ಶಿವಮೊಗ್ಗ ನಗರದ ನಾಗರೀಕ ಸಮಾಜ ಅತ್ಯಂತ ದುಃಖ ಮತ್ತು ಮತ್ತು ಸಂತಾಪವನ್ನು ಮುಸ್ಲಿಂ ಸಮುದಾಯವು ಸೇರಿದಂತೆ ಎಲ್ಲಾ ವರ್ಗ ಎಲ್ಲಾ ಧರ್ಮದ ಜನರು ಸದರಿ ಹರ್ಷ ಎನ್ನುವ ಯುವಜನ ಕೊಲೆಯ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿವಮೊಗ್ಗ ನಗರದ ದೊಡ್ಡಪೇಟೆ ಠಾಣೆಯ ಠಾಣಾಧಿಕಾರಿ ತನ್ನ ಠಾಣಾ ಮೊಕದ್ದಮೆ ಸಂಖ್ಯೆ: 77/2022 ರಲ್ಲಿ ಭಾರತೀಯ ದಂಡ ಸಂಹಿತೆಯ 302 ಮತ್ತು ಇತರೆ ಕಲಂಗಳಅಡಿಯಲ್ಲಿ ಒಂದು ಪ್ರಕರಣವನ್ನು ಸಹ ದಾಖಲಿಸಿಕೊಂಡಿರುತ್ತಾರೆ.

ಶಿವಮೊಗ್ಗ ನಗರದ ದೊಡ್ಡಪೇಟೆ ಪೊಲೀಸ್ ಠಾಣೆಯ ಠಾಣಾ ಮೊಕದ್ದಮೆ ಸಂಖ್ಯೆ 77 /2022 ರ ದಾಖಲಾಗಿರುವ ಹರ್ಷ ಎನ್ನುವ ಯುವಕನ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮರ್ಥವಾದ ತನಿಖೆಯನ್ನು ನಡೆಸಿ ಕೃತ್ಯದಲ್ಲಿ ಭಾಗಿಯಾಗಿರುವ ಪ್ರತಿಯೊಬ್ಬರನ್ನೂ ಆರೋಪಿಗಳನ್ನಾಗಿಸಿ ಕಾನೂನಿನ ಸುಪರ್ತಿಗೆ ಒಳಪಸಲು ಪೊಲೀಸ್ ಅಧಿಕಾರಿಗಳು ಮತ್ತು ಪ್ರಕರಣದ ತನಿಖಾಧಿಕಾರಿ ಸೂಕ್ತ ತನಿಖೆ ಮಾಡುವ ಕಾನೂನು ಬದ್ಧ ಜವಾಬ್ದಾರಿಯನ್ನು ಹೊಂದಿರುತ್ತಾರೆ.

ಶಿವಮೊಗ್ಗ ನಗರದ ದೊಡ್ಡಪೇಟಿ ಠಾಣೆಯ ಮೊಕದ್ದಮೆ ಸಂಖ್ಯೆ 77/2022 ರಲ್ಲಿರುವ ಪ್ರಕರಣ ಪ್ರಾಥಮಿಕ ತನಿಖಾ ಹಂತದಲ್ಲಿರುವ ಪೊಲೀಸ್ ತನಿಖಾಧಿಕಾರಿಗಳು ಯಾವುದೇ ಆರೋಪಿಗಳನ್ನು ಕೊಲೆಗೆ ನಿಜವಾದ ಕಾರಣಕರ್ತರನ್ನು ಕೊಲೆಯ ಹಿಂದಿರುವ ಉದ್ದೇಶವನ್ನು ತನಿಖೆ ಮಾಡುವ ಮೊದಲೇ ಈ ಪಿರ್ಯಾದಿನ ಆರೋಪಿ 1 ಮತ್ತು 2 ರವರು ಏಕಪಕ್ಷೀಯವಾಗಿ ರಾಜಕೀಯ ಮತ್ತು ಧಾರ್ಮಿಕ ಕಾರಣಗಳಿಂದ ಸದರಿ ಹರ್ಷ ಎಂಬ ಯುವಕನ ಕೊಲೆಗೆ ಮುಸ್ಲಿಂ ಜನಾಂಗವೇ ಕಾರಣ ಎಂದು ದುರುದ್ದೇಶದಿಂದ ಹಾಗೂ ಮುಸ್ಲಿಂ ಜನಾಂಗವನ್ನು ಗುರುತರವಾದ ಸಮುದಾಯಿಕ ಆರೋಪಕ್ಕೆ ಒಳಪಡಿಸುವ ಉದ್ದೇಶದಿಂದ ಸಾರ್ವಜನಿಕವಾಗಿ ಹೇಳಿಕೆ ನೀಡುವ ಮೂಲಕ ಶಿವಮೊಗ್ಗ ನಗರದಲ್ಲಿ ಒಂದು ಕೋಮಿನ ಜನರನ್ನು ಒಂದು ಕೂಡಿಸಿ ಕೊಂಡು , ಸಾರ್ವಜನಿಕ ದೊಂಬಿ ಆಸ್ತಿ ಪಾಸ್ತಿಗಳಿಗೆ ನಷ್ಟವುಂಟು ಮಾಡುವ ಪ್ರಚೋದಿಸಿದ್ದು ಸದರಿ ಪ್ರಚೋದನೆಯ ಪರಿಣಾಮವಾಗಿ ಶಿವಮೊಗ್ಗ ನಗರವು ಒಂದು ಕೋಮಿನ ವಿರುದ್ದ ಮರವಣಿಗೆಯ ನೆಪದಲ್ಲಿ ದಿ:21-02-2022 ರಂದು ದೊಂಬಿಯನ್ನು ನಡೆಸಿ, ಹಲವಾರು ಅಮಾಯಕ ಜನರ ಮೇಲೆ ಕಲ್ಲು ತೂರಾಟ ಮಾಡಿ, ಅವರ ಮನೆ ಅಂಗಡಿ ವಾಹನಗಳಿಗೆ ಹಾನಿ ಮಾಡುವ ಮೂಲಕ ಮತ್ತು ಬೆಂಕಿ ಹಚ್ಚಿ ಸುಡುವ ಮೂಲಕ ಗಲಭೆ ನಡೆಸಲಾಗಿರುತ್ತದೆ, ಸದರಿ ಗಲಭೆಯು ಈ ದೂರಿನ ಆರೋಪಿತರು ಮಾಡಿದ ದುರುದ್ದೇಶಪೂರಿತ ಪ್ರಚೋದನಾಕಾರಿ ಭಾಷಣ ಮತ್ತು ಹೇಳಿಕೆಯ ಕಾರಣದಿಂದ ಜರುಗಿರುತ್ತದೆ. ಹಾಗೂ ಸದರಿ ಆರೋಪಿಗಳು ಪ್ರಚೋದನಾಕಾರಿ ಹೇಳಿಕೆಯನ್ನು ಸಾರ್ವಜನಿಕವಾಗಿ ನೀಡಿ ಒಂದು ಕೋಮಿನ ವಿರುದ್ಧ ಮತ್ತೊಂದು ಹಿಂದೂ ಕೋಮಿನ ಜನರನ್ನು ಪ್ರಚೋಧಿಸುವ ಮೂಲಕ ಶಿವಮೊಗ್ಗ ನಗರದ ಶಾಂತಿಭಂಗ ಉಂಟುಮಾಡಿ ಸಾರ್ವಜನಿಕವಾಗಿ ಆಸ್ತಿ ಪಾಸ್ತಿಗೆ ಒಂದು ಕೋಮಿನ ಪ್ರಚೋದಿತ ಜನರು ಮತ್ತೊಂದು ಹಿಂದು ಕೋಮಿನ ಮೇಲೆ ಗಲಾಟೆ ಮತ್ತು ಹಾನಿ ಸೃಷ್ಟಿ ಮಾಡಲು ಕಾರಣರಾಗಿರುತ್ತಾರೆ ಮತ್ತು ಶಿವಮೊಗ್ಗ ನಗರವು ಅಶಾಂತವಾಗಿರುತ್ತದೆ ಸದರಿ ಸಾರ್ವಜನಿಕ ಗಲಭೆ ಮತ್ತು ಅಶಾಂತಿಯ ಕಾರಣದಿಂದ ನಗರದಲ್ಲಿ ಕೆಲವು ದಿನಗಳ ಕಾಲ ನಿಷೇದಾಜ್ಞೆ ಜಾರಿಯಾಗಿದ್ದು ಸಾರ್ವಜನಿಕರ ಸಹಜ ಜೀವನ ಅಸ್ತವ್ಯಸ್ತಗೊಂಡಿರುತ್ತದೆ. ಆದರೆ ಮೇಲ್ಕಂಡ ಆರೋಪಿಗಳು ತಮ್ಮ ರಾಜಕೀಯ ಹಾಗೂ ಶಾಸಕಾಂಗದ ಸ್ಥಾನಮಾನಗಳನ್ನು ಬಳಸಿಕೊಂಡು ತನಿಖಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್‌ನವರ ಮೇಲೆ ಪ್ರಭಾವ ಬೀರಿ ನಾನು ಸಲ್ಲಿಸಿರುವ ದೂರನ್ನು ಪರಿಗಣಿಸದ ರೀತಿ ಮತ್ತು ಎಫ್.ಐ.ಆರ್, ದಾಖಲಿಸದೆ ಇರುವ ರೀತಿ ಹಾಗೂ ಯಾವುದೇ ಮನ್ನಣೆ ನೀಡದೇ ಇರುತ್ತಾರೆ. ಸದರಿ ಮೇಲ್ಕಂಡ ಆರೋಪಿಗಳು ನಡೆಸಿರುವ ದುಷ್ಕೃತ್ಯಗಳು ಸಂಜ್ಞೆಯ ಅಪರಾಧಿಕ ಕೃತ್ಯಗಳಾಗಿದ್ದು, ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ದಂಡನೀಯ ಕೃತ್ಯಗಳಾಗಿರುತ್ತವೆ. ಸದರಿ ದುಷ್ಕೃತ್ಯಕ್ಕೆ ಕಾರಣರಾದ ವ್ಯಕ್ತಿಗಳು ತಮ್ಮ ಪ್ರಭಾವವನ್ನು ಪೊಲೀಸರ ಮೇಲೆ ಬೀರಿರುವುದರಿಂದ ಪೊಲೀಸರು ದೂರನ್ನು ದಾಖಲಸಿಕೊಂಡಿರುವುದಿಲ್ಲ. ಈ ಸಂಬಂಧ ನಾನು ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಿಗೆ ಲಿಖಿತ ಮನವಿಯನ್ನು ಸಲ್ಲಿಸಿ ನಾನು ಪ್ರಕರಣವನ್ನು ದಾಖಲಿಸಲು ನಿರ್ದೇಶನ ನೀಡಲು ಕೋರಿರುತ್ತೇನೆ. ಆದರೆ ಈವರೆಗೂ ಸದರಿ ಆರೋಪಿಗಳ ಮೇಲೆ ಯಾವುದೇ ಕಾನೂನು ಕ್ರಮ ಜರುಗಿರುವುದಿಲ್ಲ ಮತ್ತು ಪ್ರಕರಣ ದಾಖಲಾಗಿರುವುದಿಲ್ಲ

ಶಿವಮೊಗ್ಗ ನಗರದ ದೊಡ್ಡಪೇಟೆ ಠಾಣೆಯ ಮೊಕದ್ದಮೆ ಸಂಖ್ಯೆ 77/2022 ರಲ್ಲಿರುವ ಪ್ರಕರಣ ಪ್ರಾಥಮಿಕ ತನಿಖಾ ಹಂತದಲ್ಲಿರುವ ಸಂದರ್ಭದಲ್ಲಿಯೇ ಪೊಲೀಸ್ ತನಿಖಾಧಿಕಾರಿಗಳು ಯಾವುದೇ ಆರೋಪಿಗಳನ್ನು, ಕೊಲೆಗೆ ನಿಜವಾದ ಕಾರಣಕರ್ತರನ್ನು ಕೊಲೆಯ ಹಿಂದಿರುವ

ಉದ್ದೇಶವನ್ನು ತನಿಖೆ ಮಾಡುವ ಮೊದಲೇ ಸದರಿ ಪಿರ್ಯಾದಿನ ಆರೋಪಿ 1 ಮತ್ತು 2 ರವರು ಏಕಪಕ್ಷೀಯವಾಗಿ ರಾಜಕೀಯ ಮತ್ತು ಧಾರ್ಮಿಕ ಕಾರಣಗಳಿಂದ ಸದರಿ ಹರ್ಷ ಎಂಬ ಯುವಕನ ಕೊಲೆಗೆ ಮುಸ್ಲಿಂ ಜನಾಂಗವೇ ಕಾರಣ ಎಂದು ಆರೋಪಿಸಿದ್ದು, ಇದರಿಂದ ತನಿಖಾಧಿಕಾರಿಯ ತನಿಖೆಯ ಮೇಲೆ ಅನಗತ್ಯ ಒತ್ತಡ ಮತ್ತು ಪರಿಣಾಮ ಬೀರಿರುತ್ತಾರೆ

ಸದರಿ ಪಿರ್ಯಾದಿ ಆರೋಪಿ 1 ರವರು ಕರ್ನಾಟಕ ವಿಧಾನಸಭೆಯ ಗೌರವಾನ್ವಿತ ಶಿವಮೊಗ್ಗ ನಗರವನ್ನು ಪ್ರತಿನಿಧಿಸುತ್ತಿರುವ ಶಾಸಕರಾಗಿದ್ದು, ಆರೋಪಿ 1 ರವರು ಗೌರವಾನ್ವಿತ ವಿಧಾನಸಭೆಯಲ್ಲಿ ಸಂವಿಧಾನದ ಅಡಿಯಲ್ಲಿ ಪ್ರಮಾಣವಚನವನ್ನು ಸ್ವೀಕರಿಸಿ, ಎಲ್ಲಾ ಜಾತಿ, ಧರ್ಮ ಮತ್ತು ವರ್ಗದ ಜನರನ್ನು ಯಾವುದೇ ಭೇದ ಭಾವವಿಲ್ಲದೆ ಸಮಾನವಾಗಿ, ನೋಡುವ, ಎಲ್ಲಾ ಜನರನ್ನು ರಕ್ಷಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. 1 ನೇ ಆರೋಪಿಯು ಕರ್ನಾಟಕ ರಾಜ್ಯ ಘನ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಂಪುಟ ದರ್ಜೆ ಸಚಿವರಾಗಿದ್ದು, ಅತ್ಯಂತ ಉನ್ನತ ಮತ್ತು ನಿರ್ಧಾರ ಕೈಗೊಳ್ಳುವ ವ್ಯಕ್ತಿಯಾಗಿರುತ್ತಾರೆ. ಜೊತೆಗೆ, ಸಂವಿಧಾನದ ಅಡಿಯಲ್ಲಿ ಸಂವಿಧಾನಾತ್ಮಕ ಹುದ್ದೆಯನ್ನು ನಿಭಾಯಿಸಬೇಕಾದ ಕರ್ತವ್ಯವನ್ನು ಸಹ ಹೊಂದಿರುತ್ತಾರೆ.

ಆರೋಪಿ-2 ರವರು ಶಿವಮೊಗ್ಗ ಮಹಾನಗರ ಪಾಲಕೆಯ ಸ್ಥಳೀಯ ಸಂಸ್ಥೆಗಳ ಜನ ಪ್ರತಿನಿಧಿಯಾಗಿದ್ದು, ಇವರೂ ಸಹ ಎಲ್ಲಾ ಜಾತಿ, ಧರ್ಮ ಮತ್ತು ವರ್ಗಗಳ ಜನರನ್ನು ಸಮಾನವಾಗಿ ನೋಡುವ ಜವಾಬ್ದಾರಿಯುತ ವ್ಯಕ್ತಿಯಾಗಿರುತ್ತಾರೆ

ಸದರಿ, ಪ್ರಕರಣದ 1 ನೇ ಆರೋಪಿಯವರು ಶಿವಮೊಗ್ಗ ನಗರದ ಶಾಸಕರು ಮತ್ತು ಕರ್ನಾಟಕ ಸರ್ಕಾರದ ಸಂಪುಟ ಸಚಿವರಾಗಿದ್ದು, ಟಿ, ವಿ , ಮಾಧ್ಯಮಗಳ ಮುಂದೆ ಹಾಜರಾಗಿ "ಮುಸಲ್ಮಾನ ಗೂಂಡಾಗಳು ಹರ್ಷ ಎನ್ನುವ ಯುವಕನ ಕೊಲೆ ಮಾಡಿದ್ದು, ಈ ಹಿಂದೆ ಮುಸಲ್ಮಾನರು ಶಿವಮೊಗ್ಗದಲ್ಲಿ ಎಂದೂ ಕೂಡ ಈ ರೀತಿ ಬಾಲ ಬಿಚ್ಚಿರಲಿಲ್ಲ ಅವರ ರಾಜಕೀಯ ಲಾಭ ಪಡೆಯುವ ಉದ್ದೇಶದಿಂದ ಮುಸಲ್ಮಾನ ಗೂಂಡಾಗಳಿಗೆ ಕಾಂಗ್ರೆಸ್ ಪಕ್ಷದ ನಾಯಕ ಡಿ ಕೆ ಶಿವಕುಮಾರ್ ರವರ ಕುಮ್ಮಕ್ಕು ಸಿಗುತ್ತಿದೆ ಈ ಮುಸಲ್ಮಾನ್ ಗೂಂಡಾಗಿರಿಯನ್ನು ನಮ್ಮ ಶಿವಮೊಗ್ಗದಲ್ಲಿ ಯಾವುದೇ ಕಾರಣಕ್ಕೂ ನಾನು ಬಿಡುವುದಿಲ್ಲ, ಅದನ್ನು ಧಮನ ಮಾಡುತ್ತೇನೆ' ಎಂದು ಹೇಳಿಕೆ ನೀಡಿದ ಕಾರಣದಿಂದ ದಿನಾಂಕ:21-02-2002 ರಂದು ಶಿವಮೊಗ್ಗ ನಗರದಲ್ಲಿ ಉದ್ರಿಕ್ತ ಮತ್ತು ಗಲಭೆಯ ವಾತಾವರಣ ಸೃಷ್ಟಿಯಾಗಿರುತ್ತದೆ, ಆರೋಪಿ-1 ರವರು ಕೋಮು ಪ್ರಚೋದಕ, ಸಂವಿಧಾನ ವಿರೋದಿ, ಕಾನೂನು ಭಂಜಕ ಹೇಳಿಕೆಯನ್ನು ನೀಡಿದ ಕಾರಣದಿಂದ ಹಿಂದೂ ಸಹೋದರರ ಮನಸ್ಸಿನಲ್ಲಿ ಮುಸ್ಲಿಂ ವ್ಯಕ್ತಿಗಳ ಮೇಲೆ ದ್ವೇಷ, ಅಸೂಯೆ ಹಾಗೂ ಕಿಚ್ಚು ಉಂಟಾಗಿದ್ದು, ಅದಕ್ಕೆ ಆರೋಪಿ ಸಂಖ್ಯೆ 1 ರವರೇ ಕಾರಣಕರ್ತರಾಗಿರುತ್ತಾರೆ.

ಆರೋಪಿ-2 ರವರು ಮಾಧ್ಯಮಗಳ ಮುಂದೆ "ಪೊಲೀಸರಿಗೆ ಈ ಜನ್ಮದಲ್ಲಿ ಬುದ್ಧಿ ಬರುವುದಿಲ್ಲ, ಪೋಲೀಸ್ ಹೆಣ ಬೀಳುತ್ತೆ ಇಲ್ಲ ಅವಾಗ ನೆಟ್ಟಗೆ ಇರುತ್ತಾರೆ. ಪೋಲೀಸರ ಹೆಣ ಬೀಳಬೇಕು ಪ್ರತೀ ಸಲನೂ ನಾವು ಅವರನ್ನು ಕೇಳಕೊ, ಇವರನ್ನು ಕೇಳಕೊ, ನಾವು ಯಾವತ್ತೂ ಕೂಡ ಹಿಂದೂಗಳನ್ನೇ ಕಳಕೊಂಡಿರುವುದು, ಪೊಲೀಸ್ ನಾಮರ್ಥ ಇಲಾಖೆ ಅದು ರಕ್ಷಣಾ ಇಲಾಖೆ ವೈಫಲ್ಯತೆ, ದೌರ್ಬಲ್ಯತೆ ಇದೆ. ರಕ್ಷಣಾ ಇಲಾಖೆ ಬೇಜವಾಬ್ದಾರಿ ತನದ ವರ್ತನೆ ಮಾಡುತ್ತಿದೆ. ರಕ್ಷಣಾ ಇಲಾಖೆ ಬದುಕಿದೆಯೋ ಸತ್ತಿದಿಯೋ ಅಂತ ತಿಳಿದು ಕೊಳ್ಳಬೇಕಾಗಿದೆ . ಪೊಲೀಸ್ ಇಲಾಖೆಗೆ ಮಾನ ಮರ್ಯಾದೆ ಇಲ್ಲ ಶಿವಮೊಗ್ಗ ಜಿಲ್ಲೆಯ ನಾಮರ್ದ ಪೋಲೀಸರು, ನಾಮರ್ದ ಪೋಲೀಸ್ ಇಲಾಖೆ ಏನು ಮಾಡಬೇಕು ಅನ್ನೋದು ಗೊತ್ತಿದೆ. ಹಿಂದೂ ಸಮಾಜಕ್ಕೆ ಅಂತ್ಯಕ್ರಿಯೆ ಆಗುತ್ತೆ. ಪೊಲೀಸರು ಪರೋಕ್ಷವಾಗಿ ಮುಸ್ಲಿಮರ ಮಂಗಳ ಆಡುವಂತಹ ಸ್ಥಿತಿ ಬಂದಿದೆ. ಮಂಗಳ ಹಾಡುತ್ತೇವೆ' ಎಂದು ಹೇಳಿದ ಹೇಳಕೆಯಿಂದ ದಿನಾಂಕ: 21-02-2022 ರಂದು ಶಿವಮೊಗ್ಗ ನಗರ ಗಲಬೆಪೀಡಿತ ನಗರವಾಗಿ ಬದಲಾಗಿರುತ್ತದೆ.

ಆರೋಪಿ-1 ಮತ್ತು 2 ರವರು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಬೇಕಾದ ಜವಾಬ್ದಾರಿಯುತ ಸ್ಥಾನಗಳಲ್ಲಿದ್ದರೂ ಸಹ, ತಮ್ಮ ಜವಾಬ್ದಾರಿಯುತ್ತ ಸ್ಥಾನಗಳಿದ್ದರೂ ಸಹ ತನ್ನ ಜವಾಬ್ದಾರಿಗಳನ್ನು ನಿರ್ವಹಿಸದೆ ಗಲಬೆ ಉಂಟಾಗುವಂತಹ ಹೇಳಿಕೆಗಳನ್ನು ಸಾರ್ವಜನಿಕವಾಗಿ ನೀಡಿದ ಕಾರಣದಿಂದ ಶಿವಮೊಗ್ಗ ನಗರದ ಸೀಗೆಹಟ್ಟಿ ಬಡಾವಣೆ, ರವಿವರ್ಮ ಬೀದಿ ಮುಂತಾದ ಹತ್ತು ಹಲವುಕಡೆಗಳಲ್ಲಿ ಗಲಭೆ, ದಂಗೆ, ಕೋಮು ಗಲಭೆ ಉಂಟಾಗಿರುತ್ತದೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಫಿರ್ಯಾದಿಯವರು ದಿನಾಂಕ:22-02-2022 ರಂದು ಸಂಜೆ ಸುಮಾರು 5-30 ರಿಂದ 8.30ರ ಸಮಯದಲ್ಲಿ ದೊಡ್ಡಪೇಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಸಂಬಧಪಟ್ಟ ಪೊಲೀಸ್ ಠಾಣೆಯ ಎಸ್.ಹೆಚ್.ಓ. ಪಿರ್ಯಾದಿಯ ದೂರನ್ನು ಸ್ವೀಕರಿಸಿರುವುದಿಲ್ಲ, ನಂತರ ಪಿರ್ಯಾದಿಯು ಸಂಬಂಧಪಟ್ಟ ಪೊಲೀಸ್ ಠಾಣೆಯ, ಪೊಲೀಸ್ ಅಧೀಕ್ಷಕರಿಗೆ ಇ-ಮೇಲ್ ಮುಖಾಂತರ ದೂರನ್ನು ಸಲ್ಲಿಸಿರುತ್ತಾರೆ ಅದರೂ ಸಹ ಪಿರ್ಯಾದಿಯವರು ಕುರಿತು ಸಂಬಂದಪಟ್ಟ ಅಧಿಕಾರಿಗಳು ಎಫ್ ಐ ಆರ್ ದಾಖಲಿಸಿರುವುದಿಲ್ಲ

ದಿನಾಂಕ: 23-02-2022 ರಂದು ಪಿರ್ಯಾದುದಾರರು ಜಿಲ್ಲಾ ಪೊಲೀಸ್ ಅಧೀಕ್ಷಕರು, ಶಿವಮೊಗ್ಗ ಅಲ್ಲಿ ಇವರನ್ನು ನೇರವಾಗಿ ಭೇಟಿಮಾಡಿ, ದೂರನ್ನು ಸಲ್ಲಿಸಿ ಸ್ವೀಕೃತಿಯನ್ನು ಪಡೆದಿದ್ದು, ಯಾವುದೇ ಪ್ರತಿಕ್ರಿಯೆಯು ಈವರೆಗೂ ಬಂದಿರುವುದಿಲ್ಲ ಹಾಗೂ ಆರೋಪಿಗಳ ವಿರುದ್ಧ ಯಾವುದೇ ಠಾಣೆಯಲ್ಲಿ ಈ ವಿಚಾರವಾಗಿ ದೂರು ದಾಖಸಿರುವುದಿಲ್ಲ. ಆರೋಪಿ 1 ಮತ್ತು 2 ರವರು ರಾಜಕೀಯ ಪ್ರಭಾವಿಗಳಾಗಿದ್ದು, ತಮ್ಮ ಪ್ರಭಾವದಿಂದ ಎಲ್ಲಾ ಅಧಿಕಾರಿಗಳನ್ನು ತಮ್ಮ ವಿರುದ್ಧವಾಗಿ ದೂರು ಸ್ವೀಕರಿಸದಿರುವಂತೆ ಒತ್ತಡವನ್ನು ಹೇರಿರುವುದರಿಂದ , ಪಿರ್ಯಾದುದಾರರು ನೀಡಿರುವ ದೂರನ್ನು ಸ್ವೀಕರಿಸದೇ ಇರುವುದರಿಂದ ಹಾಗೂ ಆರೋಪಿ 1 ಮತ್ತು 2 ರವರ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳದೇ ಇರುವುದಿಂದ, "

ಪಿರ್ಯಾದುದಾರರು ಸದರಿ ಪಿರ್ಯಾದನ್ನು ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ.

ಆರೋಪಿ 1 ಮತ್ತು 2 ರವರು ಜನ ಪ್ರತಿನಿಧಿಗಳಾಗಿರುವುದರಿಂದ ಘನ ನ್ಯಾಯಾಲಯಕ್ಕೆ ಆರೋಪಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲು ನ್ಯಾಯಾಧೀಕರಣದ ವ್ಯಾಪ್ತಿಯು ಇರುತ್ತದೆ. ಹಾಗಾಗಿ ಆರೋಪಿ 1 ಮತ್ತು 2 ರವರ ಕೃತ್ಯವು ಘನ ನ್ಯಾಯಾಲಯದ ವ್ಯಾಪ್ತಿಯಲ್ಲಿ ಜರುಗಿರುತ್ತದೆ. ಆದ್ದರಿಂದ, ದಯಾಮಯಿಯಾದ ಘನ ನ್ಯಾಯಾಲಯವು ಆರೋಪಿ ಸಂಖ್ಯೆ: 1 ಮತ್ತು 2 ರವರ ವಿರುದ್ದ ಪ್ರಕರಣವನ್ನು ದಾಖಲಿಸುವಂತೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 158(3) ರಡಿಯಲ್ಲಿ ಎಸ್,ಹೆಚ್,ಓ ದೊಡ್ಡಪೇಟೆ ಪೊಲೀಸ್ ಠಾಣೆ, ಶಿವಮೊಗ್ಗ ಜಿಲ್ಲೆ ರವರಿಗೆ ಮೇಲ್ಕಂಡ ಆರೋಪಿಗಳ ವಿರುದ್ಧ ಎಫ್.ಐ.ಆರ್. ದಾಖಲಿಸಿ, ಸೂಕ್ತ ತನಿಖೆ ಕೈಗೊಂಡು ಕಾನೂನು ಕ್ರಮ ಜರುಗಿಸಲು ನಿರ್ದೇಶನ ನೀಡಬೇಕಾಗಿ ಮತ್ತು ಸದರಿ ಆರೋಪಿಗಳನ್ನು ಮೇಲ್ಕಂಡ ಅಪರಾಧಿಗಳಗೆ ವಿಚಾರಣೆ ನಡೆಸಿ ಶಿಕ್ಷೆ ನೀಡಬೇಕೆಂದು ನ್ಯಾಯ ಮತ್ತು ಸಮತೆಯ ದೃಷ್ಟಿಯಿಂದ ನಿರ್ದೇಶನ ನೀಡಬೇಕಾಗಿ ಪ್ರಾರ್ಥನೆ ಎಂಬಿತ್ಯಾಧಿಯಾಗಿ ಇದ್ದ ಪಿಸಿಆರ್ ದೂರಿನ ಮೇರೆಗೆ ಪ್ರಕರಣ ದಾಖಲಿಸಿರುತ್ತೆ

**11. (a) ತೆಗೆದುಕೊಂಡ ಕ್ರಮ:**

Investigation

**(b) ಪ್ರ.ವ.ವರದಿಯನ್ನು ಪಿರ್ಯಾದಿಯವರಿಗೆ ಅವರದೆ ಭಾಷೆಯಲ್ಲಿ ವಿವರಿಸಿ, ಓದಿ ಹೇಳಲಾಗಿದೆ ಅದರ ಪ್ರತಿಯನ್ನು ಪುಕಟ್ಟೆಯಾಗಿ ಕೊಡಲಾಗಿದೆ? :** Yes

**(c) ಪೊಲೀಸ್ ಅಧಿಕಾರಿಯು ತನಿಖೆಗೆ ಸ್ಥಳಕ್ಕೆ ಧಾವಿಸದಿದ್ದಲ್ಲಿ ಅಥವಾ ತನಿಖೆ ಮಾಡಲು ನಿರಾಕರಿಸಿದಲ್ಲಿ ಕಲಂ 157 ಸಿ.ಆರ್.ಪಿ.ಸಿ ಯ ಕಲಂ (ಎ)ಅಥವಾ (ಬಿ)ಯಡಿ ಕಾರಣವನ್ನು ದಾಖಲಿಸಬೇಕು.**

yes

**12. ಪಿರ್ಯಾದಿಯ ಸಹಿ/ ಹೆಬ್ಬೆರಳಿನ ಗುರುತು**

**13. ನ್ಯಾಯಾಲಯಕ್ಕೆ ಕಳುಹಿಸಿದ ದಿನಾಂಕ ಮತ್ತು ಸಮಯ :** 06/04/2022 18:30:00

**14. ನ್ಯಾಯಾಲಯಕ್ಕೆ ತೆಗೆದುಕೊಂಡು ಹೋದ ಪಿಸಿ/ ಹೆಚ್.ಸಿ :** HARISH ER , PC 2065

**ಓದಿ ಹೇಳಲಾಗಿ ಕೇಳಲಾಗಿ ಸರಿಯಿದೆ**

**ಠಾಣಾಧಿಕಾರಿಯ ಸಹಿ**

**ಹೆಸರು:** MANJAMMA - PSI

ಪ್ರತಿಗಳು : Superintendent of Police/Commissioner of Police
ADDL SP SHIVAMOGGA
DYSP SHIVAMOGGA
COURT
CASE FILE COPY